## ಸುದ್ದಿ ಆದ್ಯತೆ ಹಳಿ ತಪ್ಪುತ್ತಿದೆಯೆ?

ಕನ್ನಡ ಚಲನಚಿತ್ರ ನಟ ಸತ್ಯಜಿತ್ ಮತ್ತು ಅವರ ಮಗಳ ಕೌಟುಂಬಿಕ ಕಲಹವನ್ನು ಕನ್ನಡ ಸುದ್ದಿವಾಹಿನಿಗಳಲ್ಲಿ ತಾಸುಗಟ್ಟಲೇ ಸುದ್ದಿ ಮಾಡಿದ್ದು ವೀಕ್ಷಕರ ಸಹನೆಯನ್ನು ಕೆಣಕಿತು. ಇದು ಒಂದು ಕುಟುಂಬದ ವೈಯಕ್ತಿಕ ಮತ್ತು ಕೌಟುಂಬಿಕ ವಿವಾದ. ಇದರಲ್ಲಿ ಸುದ್ದಿ ವಾಹಿನಿಗಳಲ್ಲಿ ತಾಸುಗಟ್ಟಲೇ ಪ್ರಸಾರಗೊಳ್ಳಬಹುದಾದಬಹುದಾದ ಯಾವುದೇ ಸುದ್ದಿ ಮೌಲ್ಯ ಇರಲಿಲ್ಲ. ವಿಚಿತ್ರವೆಂದರೆ ಈ ಸುದ್ದಿಯನ್ನು ಪ್ರಸಾರ ಮಾಡಲು ಸುದ್ದಿ ವಾಹಿನಿಗಳಲ್ಲಿ ಹುಚ್ಚು ಪೈಪೋಟಿ ಕಾಣುತ್ತಿತ್ತು. ಸೆಲೆಬ್ರಿಟಿಗಳ ದಾಂಪತ್ಯ ಸಮಸ್ಯೆ, ಕೌಟುಂಬಿಕ ಜಗಳ, ಮತ್ತು ಗಂಡ–ಹೆಂಡತಿಯರ ಸಮಸ್ಯೆ ಮತ್ತು ಮಹಿಳೆಯರಿಗೆ ಚುಡಾಯಿಸಿದವರಿಗೆ ದಾರಿಹೋಕರು ಮಾಡುವ 'ಪೂಜೆ' ಅಗತ್ಯಕ್ಕಿಂತ ಹೆಚ್ಚು ಸಮಯನೀಸಲಾಗುತ್ತಿದೆ. ಇದು ವೀಕ್ಷಕರಿಗೆ ಬೇಸರ ಉಂಟುಮಾಡುತ್ತಿದೆ. ಇಂತಹ ಸುದ್ದಿಗಳನ್ನು ಪ್ರಸಾರ ಮಾಡುವುದರಲ್ಲಿ ಯಾವುದೇ ತಪ್ಪು ಇಲ್ಲ. ಆದರೆ ಅದಕ್ಕೊಂದು ಇತಿ ಮಿತಿ ಇರಬೇಕು. 'ಮಸಿಯೇ ಬಣ್ಣವನ್ನು ನುಂಗಿತು' ಎನ್ನುವಂತೆ ಆಗಬಾರದು.

–ರಮಾನಂದ ಶರ್ಮಾ, ಬೆಂಗಳೂರು

ವಾರದ ಪತ್ರ

## ಒದೆಯುವ ಸಂಸ್ಕೃತಿ ಸಲ್ಲದು

ಕಿಚ್ಚ ಸುದೀಪ್ ಅವರು ಚಿತ್ರರಂಗದಲ್ಲಿ 25 ವರ್ಷಗಳನ್ನು ಪೂರೈಸಿದ್ದಾರೆ. ಈ ಸಂದರ್ಭವನ್ನು ಚಲನಚಿತ್ರರಂಗ ಅತ್ಯಂತ ಸಂಭ್ರಮದಿಂದ ಆಚರಿಸುತ್ತಿದೆ. ಅವರಿಗೆ ನನ್ನ ವೈಯಕ್ತಿಕ ಅಭಿನಂದನೆಗಳು.

ತಮ್ಮ ನಟನೆಯಿಂದ ಅನೇಕ ಆದರ್ಶಗಳನ್ನು ಸುದೀಪ್ ಅವರು ಜನತೆಯ ಮೇಲೆ ಪಸರಿಸಿದ್ದಾರೆ. ಅದು ಸಂತಸದ ಸಂಗತಿ. ಆದರೆ, 'ಬಿಗ್ ಬಾಸ್' ಸರಣಿ 8ರ ಜಾಹೀರಾತಿಗಾಗಿ ಅವರು, ಮೆಷಿನ್ ಅನ್ನು ಕಾಲಿನಿಂದ ಒದೆಯುವುದು ಅಹಂಕಾರದ ಪರಮಾವಧಿ. ಈ ಕ್ರಿಯೆ ಕೆಟ್ಟ ಸಂಸ್ಕೃತಿಗೆ ನಾಂದಿ ಹಾಡುತ್ತದೆ. ಹಿರಿಯ ನಟರ ಇಂಥ ನಡೆ–ನುಡಿ ಜನತೆಯ, ಅದರಲ್ಲೂ ಯುವ ಜನತೆಯ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ.

ಕಾಲಿನಿಂದ ಯಂತ್ರವನ್ನು ಒದೆಯುವ ದೃಶ್ಯವನ್ನು ಜಾಹೀರಾತಿನಿಂದ ತೆಗೆದರೆ ಉತ್ತಮೋತ್ತಮ ಕೆಲಸವಾಗುತ್ತದೆ.

–ಕಮಲಾ ಹಂಪನಾ, ಬೆಂಗಳೂರು

## ಅವೈಜ್ಞಾನಿಕ ವಿಷಯಕ್ಕೆ ಮಹತ್ವ ಅನಗತ್ಯ

ಸ್ಟಾರ್ ಸುವರ್ಣದಲ್ಲಿ ಅನೇಕ ಪೌರಾಣಿಕ ಧಾರಾವಾಹಿಗಳನ್ನು ಪ್ರಸಾರ ಮಾಡುತ್ತಿದ್ದಾರೆ. ಮಕ್ಕಳಿಗೆ ಶಾಲೆಗಳಿಗೆ ರಜಾ ಇರುವ ಕಾರಣ ಪೌರಾಣಿಕ ಧಾರಾವಾಹಿಗಳು ಆಕರ್ಷಿಸಿವೆ. 'ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ'ಯಲ್ಲಿ ಎಲ್ಲ ಪಾತ್ರದಾರಿಗಳೂ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ.

ಚಾರಿತ್ರಿಕ ವಿಯ ವಸ್ತು ಇಟ್ಟುಕೊಂಡ ಕಥೆ ವಶೀಕರಣ, ಮಾಟ, ಮಂತ್ರವಿದ್ಯೆ ಎಂಬ ಕೆಲವು ವಿಷಯಗಳನ್ನು ವೈಭವೀಕರಿಸುತ್ತಾ ತೋರಿಸುತ್ತಿದ್ದಾರೆ. ಹಿಂದೆ ನಡೆದ ಈ ಸಂಗತಿ ಕಾಲ್ಪನಿಕವೋ ಅಥವಾ ಸತ್ಯವೋ ಎಂದು ತಿಳಿಯುವುದಿಲ್ಲ. ಇಂತಹ ಸಂಗತಿಗಳು ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರಬಹುದು. ಈಗಾಗಲೇ ಹೈದರಾಬಾದಿನಲ್ಲಿ ಜ್ಯೋತಿಷಿ ಮಾತುಗಳನ್ನು ಕೇಳಿ ತಮ್ಮ ವಿದ್ಯಾವಂತ ಮಕ್ಕಳನ್ನು ಕೊಂದಿದ್ದಾರೆ. ನಂತರ ಅವರಿಗೆ ಬುದ್ಧಿ ಭ್ರಮಣೆಯಾಗಿದೆ. ಇಂತಹ ಪ್ರಕರಣಗಳು ಸಮಾಜದಲ್ಲಿ ನಡೆಯುತ್ತಿರುವಾಗ ಮಾಟ, ಮಂತ್ರ, ವಶೀಕರಣ, ಜ್ಯೋತಿಷ್ಯದಂತಹ ಅತಿಮಾನುಷ ವಿಕಾರವನ್ನು ಪ್ರಸಾರ ಮಾಡಿದರೆ ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುತ್ತದೆ. ಯಾವುದೇ ಪುರಾಣ ಕಥೆಯಲ್ಲಿ ಅವೈಜ್ಞಾನಿಕ ವಿಷಯಗಳಿಗೆ ಮಹತ್ವ ನೀಡಬೇಡಿ.

–ಎಂ.ಎಸ್. ಉಷಾ ಪ್ರಕಾಶ್, ಮೈಸೂರು

## ಮುದ್ದಣ್ಣ ಮನೋರಮೆ ಸಲ್ಲಾಪ

ಶಾಲೆ ಕಾಲೇಜುಗಳಲ್ಲಿ ಕನ್ನಡ ವಿಷಯವನ್ನು ಅಭ್ಯಾಸ ಮಾಡುವಾಗ 'ಮುದ್ದಣ ಮನೋರಮೆಯರ ಸರಸ ಸಲ್ಲಾಪ' ಪಾಠವನ್ನು ಓದದವರಿಗೆ ಅದರ ಸ್ವಾದವನ್ನುಅನುಭವಿಸದವರಿಗೆ 'ಕನ್ನಡತಿ' ಆ ಕೊರತೆಯನ್ನು ನೀಗಿಸುತ್ತದೆ.

ಇಲ್ಲಿ ಭುವಿ ಮತ್ತು ಹರ್ಷರ ನಡುವೆ ನಡೆಯುವ ಮಾತುಕಥೆಯ ವೈಖರಿ ಮುದ್ದಣ್ಣ– ಮನೋರಮೆಯರ ಸಲ್ಲಾಪವನ್ನು ಸ್ಮರಿಸುವಂತಿದೆ. ಇವರ ಸಂಭಾಷಣೆ ಅಷ್ಟು ರಮ್ಯ ಅಗಿರದಿದ್ದರೂ, ಇವರ ಮಾತುಗಳಲ್ಲಿ ಶೃಂಗಾರ ರಸ ಅಗೋಚಸುತ್ತದೆ. ಬಿಸಿ ಅಪ್ಪುಗೆ ಇಲ್ಲ, ಫ್ಲಿಟಿಂಗ್ ಮೊದಲೇ ಇಲ್ಲ, ಚುಚ್ಚುಮಾತಿಲ್ಲ, ಮರ್ಯಾದೆ ಮೀರುವ ಮಾತಿಲ್ಲ, ದೇಹ ಕೊಂಕಿಸಿ–ಬಗ್ಗಿಸುವ ಬಿನ್ನಾಣವಿಲ್ಲ. ಅದರೂ ನವಿರಾದ ರೋಮಾನ್ಸ್ ಕಾಣುತ್ತದೆ. ಅವರು ತಮ್ಮದೈನಂದಿನ ಸಮಸ್ಯೆಗಳನ್ನು ಮಾತನಾಡುತ್ತಿದ್ದರೂ ಅವರಲ್ಲಿ ಪರಸ್ಪರರ ಬಗೆಗೆ ಹುದುಗಿರುವ ಅವ್ಯಕ್ತವಾದ ಪ್ರೀತಿ ಪ್ರೇಮ ಅವರಿಗರಿವಿಲ್ಲದಂತೆ ಹೊರಹೊಮ್ಮಿ ವೀಕ್ಷಕರಲ್ಲಿ ಒಂದು ರೀತಿಯ ಅಹ್ಲಾದಕರ ಮಿಡಿತ ಉಂಟುಮಾಡುತ್ತದೆ.

–ರಮಾನಂದ ನವದೆಹಲಿ

## ರೋಚಕ 'ಸೀತೆಯ ರಾಮ'

ಸ್ಟಾರ್‌ಸುವರ್ಣದ'ಸೀತೆಯರಾಮ'ಧಾರಾವಾಹಿಚೆನ್ನಾಗಿಮೂಡಿಬರುತ್ತಿದೆ. ಇದೊಂದು ಡಬಿಂಗ್ ಧಾರಾವಾಹಿಯಾದರೂ ಪಾತ್ರಗಳಲ್ಲಿ ನೈಜತೆ ಎದ್ದುಕಾಣುತ್ತಿದೆ. ರಾಮ, ಲಕ್ಷ್ಮಣ, ಹನುಮಂತ, ಸೀತಾ.. ಮುಂತಾದ ಪಾತ್ರಧಾರಿಗಳು ಗಮನಸೆಳೆಯುತ್ತಿದ್ದು, ಧಾರಾವಾಹಿ ಅಂತಿಮ ಹಂತ ತಲುಪಿದೆ. ಲಂಕೆಯ ಅಶೋಕವನದಲ್ಲಿ ಸೀತಾಳನ್ನು ರಾವಣ ಬಂಧಿಯಾಗಿಸಿದ್ದು, ರಾವಣನ ಅಟ್ಟಹಾಸ ಎಲ್ಲವೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. ರಾಕ್ಷಸಕುಲದವಳಾಗಿದ್ದರೂ ರಾಮ ಅವತಾರಪುರುಷ ಎಂಬುದು ತಿಳಿದ ತ್ರಿಜಟಾ, ಸೀತೆಗೆ 'ಮಾತೆ'ಯ ಸ್ಥಾನದಲ್ಲಿ ನಿಂತು ಬೆಂಬಲ ನೀಡಿದ ಪರಿ ಅನನ್ಯ. ರಾವಣನ ಅಂತ್ಯ, ವಿಭೀಷಣನನ್ನು ಲಂಕೆಯ ಅಧಿಪತಿಯನ್ನಾಗಿಸಿದ್ದು, ಹನುಮಂತನ ಸ್ವಾಮಿನಿಷ್ಠೆ ಕೂಡ ಅಭಿನಯದಲ್ಲಿ ರೋಚಕವಾಗಿ ಮೂಡಿಬಂದಿದೆ. ಮೊದಲು ನಿತ್ಯವೂ ಪ್ರಸಾರವಾಗುತ್ತಿದ್ದ ಈ ಧಾರಾವಾಹಿಯನ್ನು ಭಾನುವಾರ ಒಂದು ಗಂಟೆಯ ಅವಧಿಗೆ ಮಾತ್ರ ಸೀಮಿತಗೊಳಿಸಿದ್ದು ಮಾತ್ರ ಆಕ್ಷೇಪಾರ್ಹ.

–ವಿನಾಯಕ ಹೆಗಡೆ, ಬೆಂಗಳೂರು

## ಸಾನ್ಯಳಿಂದ ಇಂಗ್ಲಿಷ್ ಕೊಲೆ

ಕಲರ್ಸ್ ಕನ್ನಡದ ಜನಪ್ರಿಯ ಧಾರಾವಾಹಿ 'ಕನ್ನಡತಿ' ಕನ್ನಡದ ಬಗ್ಗೆ ಸುಧಾ ಓದುಗರು ನಾನಾ ರೀತಿ ಅನಿಸಿಕೆ ವ್ಯಕ್ತಪಡಿಸಿದ್ದರು. ಈಗ ಇಂಗ್ಲಿಷ್ ಪದದಲ್ಲೂ ಸಾನ್ಯಳಿಂದ ಅಪಚಾರ ಆಗುತ್ತಿದೆ. 'ಹರ್ಟ್' ಎಂಬುದರ ಬದಲು 'ಹಾರ್ಟ್' ಎಂದು ಹೇಳಿದ್ದಳು. ಆದಿ ಜೊತೆ ಮಾತನಾಡುವಾಗ 'ಸಾರಿ' ಬದಲು 'ಶೋರಿ' ಎಂದು ಉಚ್ಚರಿಸಿ ವೀಕ್ಷಕರಿಗೆ ಕಸಿವಿಸಿ ಉಂಟುಮಾಡಿದಳು ಎಂದರೆ ತಪ್ಪಲ್ಲ.

–ಎನ್.ಎಸ್. ಚಂದ್ರಶೇಖರ್, ಬೆಂಗಳೂರು.

## ಬಯಲಾದ 'ಸತ್ಯ'

ಝೀ ಕನ್ನಡದ 'ಸತ್ಯ'ದಲ್ಲಿ ಹುರುಳಿಲ್ಲ ಎನ್ನುವುದು 'ಸತ್ಯ'. ಕಥೆ ತುಂಬಾ ಸಿಲ್ಲಿ ಯಾಗಿದೆ ಎಂದು ಅನ್ನಿಸುತ್ತದೆ. ದೊಡ್ಡ ಅಂಗಡಿ ಒಂದರಲ್ಲಿ ಸಿಲಿಕಿರುವ ಸನ್ನಿವೇಶವನ್ನೇ ಒಂದು ವಾರ ನಿರೂಪಿಸುವುದರಲ್ಲಿ ಯಾವ ಅರ್ಥವೂ ಇಲ್ಲ. ಏನೇ ಆದರೂ ಈ ಧಾರಾವಾಹಿಯ ಮೂಲಕ ಸಮಾಜಕ್ಕೆ ಏನು ಹೇಳಲು ಹೊರಟಿದ್ದಾರೆ ಎನ್ನುವುದೂ ತಿಳಿಯದು. ಬೇಗ ದಿಕ್ಕು ತಪ್ಪಿದ ಕಥೆಯನ್ನು ಭೂಮಿಕೆಯ ಕೇಂದ್ರಕ್ಕೆ ತರಬೇಕೆಂದು ವಿನಂತಿ.

–ಅರುಣ್ ಕೆ.ಎನ್. ಬೆಂಗಳೂರು